**ಅಸಲು ದಾವಾ ನಂ. 60/2016** **ಪಿ ಡಬ್ಲ್ಯೂ :1**

**(ಇಂದು ದಿನಾಂಕಃ 25-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಸಿ ಎಂ ಸಿ ರವರಿಂದಃ**

ನಾನು ಶಿಕ್ಷಕಿಯಾಗಿ ನಿವೃತ್ತಿ ಹೊಂದಿರುತ್ತೇನೆ. ಮೊಹಮದ್ ಖಾಸಿಂರವರಿಗೆ ನಾಲ್ಕು ಜನ ಗಂಡು ಮತ್ತು ಎರಡು ಹೆಣ್ಣು ಮಕ್ಕಳು. ಅವರ ವಂಶವೃಕ್ಷ ನನ್ನ ಬಳಿ ಇರುವುದಿಲ್ಲ. ಅದು ಮನೆಯಲ್ಲಿ ಇರಬಹುದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಮೊಹಮದ್ ಖಾಸಿಂ ರವರ ತಂದೆ ಹೆಸರು ಹಯಾದ್. ಹಯಾದ್ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಪೂರ್ತಿಯಾಗಿ ಗೊತ್ತಿರುವುದಿಲ್ಲ. ಮೊಹಮದ್ ಖಾಸಿಂರವರಿಗೆ ಮೊಹಮದ್ ಹಯಾದ್ ಎಂಬ ತಮ್ಮ ಇದ್ದ ಎಂದರೆ ಸರಿ. ಮೊಹಮದ್ ಖಾಸಿಂ ಮತ್ತು ಮೊಹಮದ್ ಹಯಾದ್ ಒಂದೇ ಕುಟುಂಬಕ್ಕೆ ಸೇರಿದವರು ಎಂದರೆ ಸರಿ.

ಸ ನಂ.36 ಯಾವ ಊರಿನಲ್ಲಿ ಇದೆ ಮತ್ತು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿರುವುದಿಲ್ಲ. ಈಗ ಸದರಿ ಆಸ್ತಿ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಕುಲ್ ಸುಂಬಿ 1ನೇ ಪ್ರತಿವಾದಿಯ ಅಣ್ಣನ ಹೆಂಡತಿ . ಖುಲ್‌ಸುಂಬಿರವರಿಗೆ ದಾವಾ ಆಸ್ತಿ ಯಾವ ರೀತಿ ಬಂತು ಎಂದರೆ ಸಾಕ್ಷಿಯು ಭೂ ಸ್ವಾಧೀನ ಗೊಂಡಿದ್ದರಿಂದ ಬಂದಿರುತ್ತದೆ ಎಂದು ಉತ್ತರಿಸುತ್ತಾರೆ. ವರಟಿಕೆರೆ ಗ್ರಾಮದ ಸ ನಂ.77 ಮುಳುಗಡೆಯಾಗಿರುತ್ತದೆ. ಅದರ ಬದಲಿಗೆ ಖುಲ್ ಸುಂಬಿರವರಿಗೆ ದಾವಾ ಜಮೀನನ್ನು ಮಂಜೂರು ಮಾಡಿರುತ್ತಾರೆ. ಸ ನಂ.77 ಆಸ್ತಿ ಮೊಹಮದ್ ಖಾಸಿಂ ರವರ ಹೆಸರಿನಲ್ಲಿ ಇತ್ತು. ಮೊಹಮದ್ ಖಾಸಿಂ ರವರ ಹೆಸರಿನಲ್ಲಿ ಇದ್ದ ಸ ನಂ.77 ಆಸ್ತಿ ಮುಳುಗಡೆಯಾಗಿತ್ತು ಎಂದು ತೋರಿಸಲು ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಯಾವ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಪಹಣಿಯನ್ನು ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಸ ನಂ.77 ಆಸ್ತಿ ಮೊಹಮದ್ ಖಾಸಿಂ ಅಥವಾ ಖುಲ್ ಸುಂಬಿ ರವರ ಹೆಸರಿನಲ್ಲಿ ಇದೆ ಎಂದು ತೋರಿಸಲು ಯಾವುದೇ

ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸ ನಂ.77 ಮುಳುಗಡೆಯಾಗಿದ್ದಕ್ಕೆ ಪರಿಹಾರದ ಹಣವನ್ನು ಖುಲ್ ಸುಂಬಿರವರ ಮಕ್ಕಳು ತೆಗೆದುಕೊಂಡಿರುತ್ತಾರೆ. ಪರಿಹಾರ ತೆಗೆದುಕೊಂಡ ಬಗ್ಗೆ ಮುಳುಗಡೆ ಕಛೇರಿಯಲ್ಲಿ ದಾಖಲೆಗಳು ಇರುತ್ತವೆ ಎಂದರೆ ಸರಿ. ಅದನ್ನು ತಂದು ಹಾಜರುಪಡಿಸಲು ನನಗೆ ತೊಂದರೆ ಇರುತ್ತದೆ.

1ನೇ ಪ್ರತಿವಾದಿಯ ತಂದೆ ಮೊಹಮದ್ ಹಯಾದ್ ರವರಿಗೆ ಸೇರಿದ ಆಸ್ತಿ ಯಗಚಿ ಜಲಾಶಯ ಯೋಜನೆಗೆ ಮುಳುಗಡೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಖುಲ್‌ಸುಂಬಿರವರಿಗೆ ಮಂಜೂರಾಗಿದೆ ಎಂದು ಹೇಳಿರುವ ಮಂಜೂರಾತಿ ಪತ್ರವನ್ನು ನಾನು ನೋಡಿರುತ್ತೇನೆ. ಅದರ ಅಸಲು ಪ್ರತಿ ನನ್ನ ಬಳಿ ಇರುವುದಿಲ್ಲ. ಅದರ ಮೂಲಪ್ರತಿ ಖುಲ್‌ಸುಂಬಿ ರವರ ಹತ್ತಿರ ಇತ್ತು ಎಂದರೆ ಸರಿ. ಖುಲ್‌ಸುಂಬಿ ರವರು ಸದರಿ ಮಂಜೂರಾತಿಯ ಮೂಲಪ್ರತಿಯನ್ನು 1ನೇ ಪ್ರತಿವಾದಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಮೂಲ ಪ್ರತಿ ನನ್ನ ಭಾವ ಅನ್ವರ್ ಅಹಮ್ಮದ್ ರವರ ಬಳಿ ಇರುತ್ತದೆ. ಅವರು ಈಗ ಬದುಕಿರುವುದಿಲ್ಲ. ಈ ಪ್ರಕರಣದಲ್ಲಿ ಅವರ ಹೆಂಡತಿ ಮತ್ತು ಮಕ್ಕಳು ಪಕ್ಷಗಾರರು. ಆ ಕಾರಣಕ್ಕೆ ಅವರಿಂದ ಮೂಲ ಪ್ರತಿಯನ್ನು ತಂದು ಹಾಜರುಪಡಿಸಬಹುದಿತ್ತು ಎಂದರೆ ಸಾಕ್ಷಿಯು ಅವರು ಮೈಸೂರಿನಲ್ಲಿ ಇರುವುದು, ನಾನು ಬೆಂಗಳೂರಿನಲ್ಲಿ ಇರುವುದು ಆ ಕಾರಣಕ್ಕೆ ಹಾಜರುಪಡಿಸಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. ನನ್ನನ್ನು ಹೊರತುಪಡಿಸಿ ಇನ್ನಿರುವ 12 ಜನ ವಾದಿಯರು ಯಾವತ್ತೂ ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ.

ಮಂಜೂರಾತಿ ಪತ್ರದಲ್ಲಿ ಖುಲ್‌ಸುಂಬಿ ರವರ ಕುಟುಂಬದ ಪರವಾಗಿ ಎಂದು ಬರೆದಿರುವುದಿಲ್ಲ. ಖುಲ್‌ಸುಂಬಿ ರವರು ಜೀವಂತವಾಗಿದ್ದಾಗ ಚಿಕ್ಕಮಗಳೂರಿನಲ್ಲಿ ನನ್ನೊಂದಿಗೆ ವಾಸವಾಗಿದ್ದರು. ನಾನು ಸದರಿ ವಿಷಯವನ್ನು ನನ್ನ ವಾದಪತ್ರದಲ್ಲಿ ಅಥವಾ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿದ್ದೀನಾ ಎಂದರೆ ಸಾಕ್ಷಿಯು ಆ ಪ್ರಸಂಗ ಬರಲಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಗಂಡ ದಿಃ 12-04-2001 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ಗಂಡನನ್ನು ಕೊಲೆ ಮಾಡಲಾಗಿತ್ತು. ಆ ಪ್ರಕರಣದಲ್ಲಿ ನನ್ನ ಗಂಡನ ಅಣ್ಣನ ಮಗ ಶಕೀಲ್ ಆರೋಪಿಯಾಗಿದ್ದ.

ನನ್ನ ಗಂಡನ ಕುಟುಂಬಕ್ಕೆ ಸೇರಿದಂತೆ ಒಂದು ಕಡೆ 15 ಎಕರೆ 23 ಗುಂಟೆ ಜಮೀನು ಇತ್ತು. ಮತ್ತೊಂದು ಕಡೆ 06 ಎಕರೆ 10 ಗುಂಟೆ ಇತ್ತು ಮತ್ತು ಸ ನಂ.77 ರಲ್ಲಿ 04 ಎಕರೆ ಜಮೀನು ಇತ್ತು. ಮೂಲತಃ ಈ ಜಮೀನುಗಳು ಮೊಹಮದ್ ಖಾಸಿಂ ರವರು ಖರೀದಿ ಮಾಡಿರುತ್ತಾರೆ. ಈ ಬಗ್ಗೆ ದಾಖಲೆ ಇರುತ್ತದೆ. ಮೊಹಮದ್ ಖಾಸಿಂ ರವರ ಕುಟುಂಬದಲ್ಲಿ 2001 ರಲ್ಲಿ ನೊಂದಾಯಿತ ವಿಭಾಗ ಪತ್ರ ಆಗಿರುತ್ತದೆ. ಸದರಿ ವಿಭಾಗಪತ್ರ ನನ್ನ ಬಳಿ ಇರುತ್ತದೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

ಪ್ರತಿವಾದಿಯ ತಂದೆ ಮೊಹಮದ್ ಹಯಾದ್ ರವರಿಗೆ ವಿಭಾಗದಲ್ಲಿ ಯಾವ ಆಸ್ತಿ ಹೋಯಿತು ಎಂದು ನನಗೆ ಗೊತ್ತಿರುವುದಿಲ್ಲ. ವಿಭಾಗಪತ್ರದಲ್ಲಿ ಈ ದಾವೆಯ ವಾದಿಯರು ಪಕ್ಷಗಾರರಾಗಿರುತ್ತಾರೆ. ವಿಭಾಗಪತ್ರಕ್ಕೆ ಇಬ್ಬರು ನಾದಿನಿಯರಾದ ಅಕ್ತರ್ ಭಾನು ಮತ್ತು ಸಾಜಿದಾ ಭಾನು ರವರು ಸಹಿ ಮಾಡಿರುವುದಿಲ್ಲ. ಅವರ ಪಾಲಿಗೆ ಈ ದಾವಾ ಅಸ್ತಿ ಮತ್ತು ಇನ್ನೊಂದು ಕಡೆ 01 ಎಕರೆ 14 ಗುಂಟೆ ಜಮೀನನ್ನು ಬಿಟ್ಟಿರುತ್ತಾರೆ. ನೊಂದಾಯಿತ ವಿಭಾಗಪತ್ರವನ್ನು ದಿಃ 23-11-2001 ರಂದು ಮಾಡಿರುತ್ತಾರೆ. 12 ಮತ್ತು 13 ನೇ ವಾದಿಗಳ ಹಿಸ್ಸೆಗೆ ಬಿಟ್ಟ ಆಸ್ತಿಗಳು ಖುಲ್‌ಸುಂಬಿ ರವರ ಹೆಸರಿನಲ್ಲಿ ಇತ್ತು. ದಾವಾ ಆಸ್ತಿ ಖಾತೆ 2015 ರಲ್ಲಿ ನಾನು ನೋಡಿದಾಗ 3 ನೇ ಪ್ರತಿವಾದಿ ಹೆಸರಿನಲ್ಲಿ ಇತ್ತು. 3ನೇ ಪ್ರತಿವಾದಿಗೆ ದಾವಾ ಅಸ್ತಿಯನ್ನು 1ನೇ ಪ್ರತಿವಾದಿ ಮಾರಿರುತ್ತಾರೆ. 1ನೇ ಪ್ರತಿವಾದಿ ಹೆಸರಿಗೆ ಆಸ್ತಿಯನ್ನು ಮಾರಾಟ ಮಾಡಿದಾಗ ಅವರ ಹೆಸರಿನಲ್ಲಿ ಖಾತೆ ಇರಲಿಲ್ಲ.

1ನೇ ಪ್ರತಿವಾದಿ ನನ್ನ ಅತ್ತೆಯ ಮರಣ ಪ್ರಮಾಣಪತ್ರವನ್ನು ಸೃಷ್ಟಿ ಮಾಡಿ ನನ್ನ ಅತ್ತೆ ದಾನ ಮಾಡಿದ್ದಾರೆ ಎಂದು ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿ ಅವರ ಹೆಸರಿಗೆ ಖಾತೆ ಮಾಡಿಸಿರುತ್ತಾರೆ. 1ನೇ ಪ್ರತಿವಾದಿಯವರ ಹೆಸರಿಗೆ ಆದ ಖಾತೆಯನ್ನು ತಹಸೀಲ್ದಾರ್ ಮುಂದೆ ಪ್ರಶ್ನೆ ಮಾಡಿರುತ್ತೇವೆ ಮತ್ತು ಪ್ರಥಮ ವರ್ತಮಾನ ವರದಿ ಕೂಡ ಆಗಿರುತ್ತದೆ. ಪೋಲೀಸರು ತನಿಖೆ ಮಾಡಿದ ನಂತರ ನಾನು ಕೊಟ್ಟ ದೂರು ಸುಳ್ಳು ದೂರು ಎಂದು ಬಿ ವರದಿ ಸಲ್ಲಿಸಿದ್ದಾರೆ

ಎಂದರೆ ಸಾಕ್ಷಿಯು ಅನ್ವರ್ ಅಹಮದ್ ರವರು ದೂರು ಕೊಟ್ಟಿದ್ದರು, ಅವರು ಮೃತಪಟ್ಟಿದ್ದರಿಂದ ಆ ರೀತಿ ವರದಿ ಸಲ್ಲಿಸಿರುತ್ತಾರೆ ಎಂದು ಉತ್ತರಿಸುತ್ತಾರೆ.

ಅನ್ವರ್ ಅಹಮದ್ ರವರು ಮಹಮದ್ ಖಾಸಿಂ ರವರ 3ನೇ ಮಗ ಆಗಿರುತ್ತಾರೆ. ನಾನು ತಹಸೀಲ್ದಾರ್ ರವರಿಗೆ ಅವರ ಖಾತೆ ವಜಾ ಮಾಡಿ ಎಂದು ಹಾಕಿದ ಅರ್ಜಿ ವಜಾ ಆಗಿರುತ್ತದೆ. ಖುಲ್‌ಸುಂಬಿ ರವರ ಎಲ್ಲ ಮಕ್ಕಳು ಸೇರಿ ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಅನ್ವರ್ ಅಹಮದ್ ಎಲ್ಲ ಮಕ್ಕಳ ಪರವಾಗಿ ದೂರು ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಅವರು ತೀರಿಕೊಂಡ ನಂತರ ನಾವು ಪೋಲೀಸರಿಗೆ ಹೋಗಿ ಅರ್ಜಿ ಕೊಟ್ಟಿರುವುದಿಲ್ಲ. ಪ್ರತಿವಾದಿಯರ ಹೆಸರಿಗೆ ಆದ ಖಾತೆಯನ್ನು ನಾನು ರೆವಿನ್ಯೂ ಅಧಿಕಾರಿಗಳ ಮುಂದೆ ಪ್ರಶ್ನಿಸಿರುವುದಿಲ್ಲ.

ಖುಲ್‌ಸುಂಬಿ ರವರು ನನ್ನ ಜೊತೆ ಮತ್ತು ಇನ್ನೂ 12 ಜನ ವಾದಿಯರ ಜೊತೆ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಒಂದೇ ದಿನ ನನ್ನ ಗಂಡನ ಮತ್ತು ನನ್ನ ಅತ್ತೆಯ ಕೊಲೆ ಮಾಡಿರುತ್ತಾರೆ. ಅದನ್ನು ನನ್ನ ಗಂಡನ ಅಣ್ಣನ ಮಗ ಶಕೀಲ್ ಮಾಡಿರುತ್ತಾನೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**